ತಪ್ಪುವ ಕಾಯಿಲೆ ಮರುಕಳಿಸಿರಲಿಲ್ಲ. ತಪ್ಪಿ ಕೂಡಾ ಅವರೆದುರು ಯಾರೂ ಇದರ ನೆನಪು ಮಾಡುತ್ತಿರಲಿಲ್ಲ. ಹೀಗಿರುವಾಗ ಬಾಲೆ, ಬಾಣಂತಿಯನ್ನು ಕಳಿಸಿಬಿಟ್ಟರೆ ಮತ್ತೆ ಮಡದಿ ಮನೋರೋಗ ಹಚ್ಚಿಕೊಂಡಾಳೆಂದು ಶೀನಪ್ಪಯ್ಯನ ಚಿಂತೆ. ಅತ್ತ ಹೆಂಡತಿಯನ್ನು ಕರೆದುಕೊಂಡು ಬರಲು ಅಮ್ಮ ಒತ್ತಾಯ ಹಾಕುತ್ತಿದ್ದಾಳೆ. ಇತ್ತ ಕಳಿಸಿಕೊಡಲು ಇವರು ಮೀನಾಮೇಷ ಎಣಿಸುತ್ತಿದ್ದಾರೆ. ನಡುವೆ ಇಕ್ಕಳದಲ್ಲಿ ಸಿಕ್ಕಿಕೊಂಡ ಸ್ಥಿತಿ ರಾಮಚಂದ್ರನದು. ಎಲ್ಲಾ ಗಂಡಸರೂ ಒಮ್ಮೆಯಲ್ಲಾ ಒಮ್ಮೆ ಇಂತಾ ಸಂದರ್ಭ ಎದುರಿಸಬೇಕಾಗಿ ಬರುತ್ತದೆಯಾ? ಯಾರಿಗೂ ಬೇಜಾರು ಮಾಡುವ ಹಾಗಿಲ್ಲ. ಹೆಂಡ್ತಿ ಮನೆಯೋರೇ ಹೆಚ್ಚಾದ್ರು ಎಂದು ಅಮ್ಮ ಅಂದುಕೊಂಡಿರುತ್ತಾಳೆಂದು ಗೊತ್ತಿದೆ ರಾಮಚಂದ್ರನಿಗೆ. ಏನೇನೋ ಸುಳ್ಳಂಪಳ್ಳಿ ಕತೆ ಹೆಣೆದು ಮತ್ತೆರಡು ತಿಂಗಳು ದೂಡಿದ.

'ಪುಟ್ಟಿಗೆ ಸೀತ ಆಗಿ ಮೂಗು ಕಟ್ಟಂಡಿದೆ ಕಣೇ. ಹವಾ ಬದಲಾಗಿ ಜ್ವರ ಬಂತೂಂದ್ರೆ ಕಷ್ಟ, ಆರನೇ ತಿಂಗಳಲ್ಲಿ ಕಳಿಸ್ಬಾರ್ದಂತಲ್ಲ? ಎಂತದೋ ಶಾಸ್ತ್ರ ಉಂಟಂತಲ್ಲ?, ಇನ್ನೇನು ಕಳಿಸಿಕೊಡೋಣಾಂತ್ಲೇ ಅಂದ್ಕಂಡಿದ್ರು. ಮಳೆ ಮತ್ತೆ ಜೋರಾಯ್ತಲ್ಲ?'

ರಾಧಮ್ಮ ಈ ವಿಷಯ ಮಾತಾಡುವುದನ್ನು ಬಿಟ್ಟು ಹೊಡೆದು, ಅಂತೂ ಇಂತೂ ಏಳು ತಿಂಗಳು ಮುಗಿಯುತ್ತದೆ ಅನ್ನುವ ಹೊತ್ತಿಗೆ ತೊಟ್ಟಿಲು ಸಮೇತ ಗಂಡನ ಮನೆಗೆ ಪಾದಾರ್ಪಣೆ ಮಾಡಿದಳು ರಾಧಮ್ಮನ ಕಿರಿ ಸೊಸೆ. ಮನೆ ಬಾಗಿಲಲ್ಲಿ ವಾರಗಿತ್ತಿ ಭವಾನಿ ಕದಲಾರತಿ ಮಾಡಿ ಬಾಲೆ, ಬಾಣಂತಿಯನ್ನು ಒಳಗೆ ಬರಮಾಡಿಕೊಂಡಳು. ಕಳಿಸಿಕೊಡಲು ಜೊತೆಗೆ ಬಂದಿದ್ದ ಸರೋಜಮ್ಮ ಇಷ್ಟು ದಿನ ಸಾಕಿದ ಎಳೆ ಕಂದನನ್ನು ಬಿಟ್ಟು ಹೋಗಲಾಗದ ಸಂಕಟಕ್ಕೆ ಹದಿನೈದು ದಿನ ಉಳಿದುಕೊಂಡರು. ಸಣ್ಣಕ್ಕಿದ್ದಾಗ ನಿದ್ದೆ ಬಿಟ್ಟು ಸಾಕೋದು. ಕೈಬಿಟ್ಟು ಆಟ ಆಡೋ ಹೊತ್ತಿಗೆ ಅಪ್ಪನ ಮನೆಗೆ ಕಳಿಸಿಕೊಡೋದು ಎಂದು ಉರು ಹಾಕುತ್ತಲೇ ಮೊಮ್ಮಗಳನ್ನು ಬಿಟ್ಟು ವಾಪಸು ಹೊರಡಲು ಅಣಿಯಾದರು. ರಾಮಚಂದ್ರ ಅತ್ತೆಯನ್ನು ಮನೆ ತಲುಪಿಸಿ ಬಂದ ಮೇಲೆ ಒಂದು ಅಂಕ ಮುಗಿದ ಹಾಗಾಯ್ತು. ಅದಾಗಲೇ ಅಂಬೆಗಾಲಿಡುತ್ತಿದ್ದ ಮೊಮ್ಮಗಳನ್ನು ಮುದ್ದುಗರೆಯುತ್ತಾ ತನ್ನಮ್ಮ ಸಂಭ್ರಮಿಸುವುದನ್ನು ಕಂಡು ರಾಮಚಂದ್ರನಿಗೆ ಖುಷಿ. ಅಣ್ಣನ ಮಗನಿಗೆ ಆಗಲೇ ಮೂರು ತುಂಬಿಯಾಗಿದೆ. ತಮ್ಮ ಹತ್ತಿರವೇ ಬೆಳೆದಿದ್ದರಿಂದ ಇರಬೇಕು, ರಾಧಮ್ಮ ಆ ಮೊಮ್ಮಗನಿಗಿಂತಾ ಅಪರೂಪಕ್ಕೆ ತೆಕ್ಕೆಗೆ ಸಿಲುಕಿದ ಮೊಮ್ಮಗಳನ್ನು ವಿಪರೀತ ಹಚ್ಚಿಕೊಂಡರು. ತನ್ನ ತಾಯಿ ವಾಪಸು ಹೋದ ನಂತರ ಒಂದು ವಾರದವರೆಗೆ ದಿವಸಾ ಅನ್ನುವ ಹಾಗೆ ನಾಗಶ್ರೀ ತೌರಿಗೆ ಫೋನು ಮಾಡಿ ಸುಖ ದುಃಖ ವಿಚಾರಿಸಿಕೊಂಡಳು. ಫೋನ್ ಎತ್ತಿದ್ದು ಶೀನಪ್ಪಯ್ಯನಾದರೆ ಅಮ್ಮ ಹುಷಾರಿದಾಳಾ? ಅನ್ನುವುದು ತಪ್ಪದೆ ಕೇಳುತ್ತಿದ್ದ ಪ್ರಶ್ನೆ. ದಿನಾ ಕೇಳುವುದಕ್ಕೇನಿರುತ್ತದೆ? ಅಂದುಕೊಳ್ಳಲಿಲ್ಲ ರಾಮಚಂದ್ರ. ಮಗಳು, ಮೊಮ್ಮಗಳ ಅಗಲಿಕೆ ತನ್ನ ತಾಯಿಯನ್ನು ಕಂಗೆಡಿಸಿಲ್ಲ ತಾನೇ ಎನ್ನುವುದು ಈ ಮಗಳ ಕಳಕಳಿ ಎಂದು ಅವನಿಗೆ ಗೊತ್ತೇ ಇದೆ. ಸರೋಜಮ್ಮ ಕೊರಗು ಹಚ್ಚಿಕೊಳ್ಳದೆ ಈ ಅಗಲಿಕೆಯನ್ನು ಸಮಾಧಾನ ಚಿತ್ತದಿಂದ ಸಹಿಸಿಕೊಂಡಿದ್ದರ ಹಿಂದಿನ ಮರ್ಮ ಅವನಿಗೆ ಗೊತ್ತೇ ಇರಲಿಲ್ಲ, ಆ ಕಾಲ ಬರುವವರೆಗೆ..

* * *

ತುಂಬಿದ ಮನೆಯಲ್ಲಿ ಇಬ್ಬಿಬ್ಬರು ಸೊಸೆಯಂದಿರಿದ್ದಾರೆ ಅಂದ ಮೇಲೆ ಕೆಲಸ ಕಾರ್ಯಗಳನ್ನು ಹಂಚಿಕೊಂಡು ಮಾಡುವುದು ಸಹಜ, ಸ್ವಾಭಾವಿಕ.

## ಭತ್ಯೆ

ಸರ್ಕಾರ
ಕೊಡುವುದು
ತುಟ್ಟಿ ಭತ್ಯೆ
ಸಂಗಾತಿ
ನೀಡುವುದು
ತುಟಿ ಭತ್ಯೆ..!

★ ಪತ್ತಂಗಿ ಎಸ್. ಮುರಳಿ




ಆದೆ ನಾಗಶ್ರೀ ಇಂತಾ ಉಸಾಬರಿಗೆ ಹೋಗದಿದ್ದುದಕ್ಕೆ ಅವಳ ವಾರಗಿತ್ತಿ ಭವಾನಿ ಕಾರಣ ಅಂದರೆ ತಪ್ಪಾಗಲಿಕ್ಕಿಲ್ಲ. ಮೊದಲಿಂದ ಚುರುಕಾಗಿ ಕೆಲಸ ಮಾಡಿ ಅಭ್ಯಾಸವಿದ್ದವಳು ಭವಾನಿ. ನಾನು ಏನಾರೂ ಕೆಲಸ ಮಾಡ್ಕೊಡ್ಲಾ? ಎನ್ನುತ್ತಾ ನಾಗಶ್ರೀ ಅಡುಗೆ ಮನೆ ಹೊಕ್ಕರೆ ಬೇಡ ಎನ್ನಲು ಅವಳಿಗೆ ಬಾಯಿ ಬರುತ್ತಿರಲಿಲ್ಲ. ತೌರುಮನೆಯಲ್ಲಿ ಯಾವತ್ತೂ ಕೆಲಸ ಮಾಡಿ ಅಭ್ಯಾಸವಿಲ್ಲದ ನಾಗಶ್ರೀಗೆ ಯಾವ ಕೆಲಸ ಹೇಳಿದರೂ ಅದನ್ನು ಮಾಡಿ ಮುಗಿಸಲು ಒಂದೊಪ್ಪತ್ತು ಬೇಕು. ರೊಟ್ಟಿ ತಟ್ಟಲು ಕುಳಿತರೆ ಎಲ್ಲಿ ಹಿಟ್ಟಿಗೆ ನೋವಾಗುತ್ತದೆಯೋ ಎನ್ನುವಷ್ಟು ನಿಧಾನ. ಒಂದು ರೊಟ್ಟಿ ಬೇಯುವುದರೊಳಗೆ ಮತ್ತೊಂದು ರೊಟ್ಟಿ ತಟ್ಟಿ ಕಾವಲಿಯ ಮೇಲೆ ಹಾಕಲು ಕಾದು ಕೂತಿರುತ್ತಿದ್ದ ಭವಾನಿಗೆ ನಾಗಶ್ರೀಯ ಕೆಲಸ ನೋಡಿ ಮನಸ್ಸಿಗೆ ರಗಳೆ. ತರಕಾರಿ ಹೆಚ್ಚುವುದು, ಕಾಯಿ ತುರಿಯುವುದು, ಯಾವ ಕೆಲಸವೇ ಇರಲಿ, ನಿಧಾನವೇ ಪ್ರಧಾನ. ಚುರುಕಾಗಿ ಕೆಲಸ ಮಾಡಿ ಅಭ್ಯಾಸವಿರುವವರಿಗೆ ನಿಧಾನಕ್ಕೆ ಬೇಕೋ, ಬೇಡವೋ ಎನ್ನುವಂತೆ ಕೆಲಸ ಮಾಡುವವರನ್ನು ಕಂಡರೆ ಮೈ ಪರಚಿಕೊಳ್ಳುವಂತಾಗುವುದು ಸ್ವಾಭಾವಿಕ.

'ಪುಣ್ಯಾತ್ಗಿತ್ತಿ, ನೀನು ಸಹಾಯಕ್ಕೆ ಬರೋದು ಬೇಡ. ನಾನೇ ಮಾಡ್ಕಂತೀನಿ. ನೀನು ನಿನ್ನ ಮಗಳನ್ನ ಆಡಿಸ್ಕಂಡಿರು..' ಅನ್ನತೊಡಗಿದಳು ಭವಾನಿ. ಆಟ ಆಡಿಸಿಕೊಂಡಿರುವ ಈ ಕೆಲಸವನ್ನೂ ರಾಧಮ್ಮ ವೈಸಿಕೊಂಡು ಬಿಟ್ಟಿದ್ದರು. ಮೊಮ್ಮಗನ ಕೈಯಿಂದ ಮೊಮ್ಮಗಳನ್ನು ಕಾಪಾಡಿಕೊಂಡಿರುವುದು ಅವರು ಸ್ವತಾ ವಹಿಸಿಕೊಂಡ ತಲೆ ಬೇನೆ. ಅರಿತೂ ಅರಿಯದ ವಯಸ್ಸಿನ ಪ್ರದೀಪ ತಂಗಿ ಮಲಗಿದ್ದಾಳೆಂಬುದನ್ನೂ ಲೆಕ್ಕಿಸದೆ ತೊಟ್ಟಿಲು ಹಿಡಿದು ಜೋರಾಗಿ ಜೀಕಿ ಓಡಿ ಹೋಗುವುದು, ಅವಳ ಕೈಲಿರುತ್ತಿದ್ದ ಗೊಂಬೆ ಕಸಿದುಕೊಂಡು ಅಳಿಸುವುದು, ಕೆನ್ನೆ ಚೂಟುವುದು, ಯಾರೂ ನೋಡದಿದ್ದರೆ ಅಂಬೆಗಾಲಿಡುವ ಅವಳನ್ನು ತಳ್ಳಿ ಬೀಳಿಸುವುದು, ಹೀಗೆ ವಯೋಸಹಜವಾದ ಪೋಕರಿತನ ಮಾಡುತ್ತಿದ್ದ. ಇದೆಲ್ಲಾ ಮಕ್ಕಳಾಟ ಎಂದು ಗೊತ್ತಿದ್ದರೂ ಸಿಟ್ಟು ಬರುತ್ತಿತ್ತು ರಾಧಮ್ಮನಿಗೆ. ಎಳೆ ಹುಡುಗನ ಅಂಡಿನ ಮೇಲೆ ಎರಡು ತಪರಾಕಿ ಬೀಳುತ್ತಿತ್ತು. ಅತ್ತೆ ಮೊಮ್ಮಗಳನ್ನು ತಲೆಯ ಮೇಲೆ ಏರಿಸಿಕೊಂಡು ತನ್ನ ಮಗನ ಮೇಲೆ ಕೈ ಮಾಡಿದರೆ ಭವಾನಿಗೆ ಸೈಸುತ್ತಿರಲಿಲ್ಲ. ಹಾಗೆಂದು ಬಾಯಿ ಬಿಟ್ಟು ದೂರುವುದಕ್ಕೂ ಸಾಧ್ಯವಾಗುತ್ತಿರಲಿಲ್ಲ. ಅತ್ತೆ ಹೊಡೆದಂತೆ ತಾನೂ ಮಗನಿಗೆ ಮತ್ತೊಂದು ಬಾರಿಸಿ ನಿನ್ನಷ್ಟಕ್ಕೆ ನೀನಿರೋಕೆ ಬರಲ್ವಾ? ಅಧಿಕಪ್ರಸಂಗೀನ ತಂದು. ಬಿತ್ತಲ್ಲ ಕಡುಬು, ಆಗ್ಬೇಕು ಹಂಗೇ.. ಎನ್ನುತ್ತಾ, ಕೈಕಾಲು ಬಡಿದು ಊರು ಮನೆ ಒಂದಾಗುವಂತೆ ಅಳುತ್ತಿದ್ದ ಮಗನನ್ನು ಸೊಂಟಕ್ಕೇರಿಸಿಕೊಂಡು ಅಡಿಗೆಮನೆ ಹೊಗುತ್ತಿದ್ದಳು. ಕಣ್ಣಲ್ಲಿ ನೀರು ಹಾಕಿಕೊಳ್ಳುತ್ತಾ ಮಗನ ಬಾಯಿಗೆ ಒಂದು ಬೆಲ್ಲದ ತುಣುಕು. ಹೊಡೆಸಿಕೊಂಡವನಿಗೆ ಎಲ್ಲಾ ಮರೆತು ಹೋಗುತ್ತಿತ್ತು. ದಿನಾ ಇಂತಾದ್ದೇನಾದರೂ ಸಣ್ಣ ಪುಟ್ಟ ರಗಳೆ ಇರುತ್ತಿದ್ದ ಮನೆಯಲ್ಲಿ ರಾಮಚಂದ್ರನಿಗೆ ಎಲ್ಲಾ ಅರ್ಥವಾಗದೆ ಇರುತ್ತಿರಲಿಲ್ಲ. ಇವೆಲ್ಲಾ ಒಂದು ದೊಡ್ಡ ವಿಷಯ ಎಂದು ಅವನಿಗಾಗಲೀ, ಅವನಣ್ಣನಿಗಾಗಲೀ ಅನಿಸುತ್ತಲೂ ಇರಲಿಲ್ಲ.

ಹೊತ್ತು ಕಳೆಯಲು ಹೆಂಡತಿ ಕೈಲೊಂದು ಕತೆ ಪುಸ್ತಕ ಹಿಡಿದು ಕೋಣೆಯ ಮಂಚದ ಮೇಲೆ ಉರುಡಿಕೊಂಡಿದ್ದರೆ ರಾಮಚಂದ್ರ ಕೀಟಲೆ ಮಾಡುತ್ತಿದ್ದ,

'ಹೋಗೇ, ಒಳಗೇನಾರೂ ಕೆಲಸ ಉಂಟಾ ನೋಡು. ಕತೆ ಪುಸ್ತಕ ಓದ್ದಿದ್ರೆ ಲೋಕ ಮುಳುಗಿ ಹೋಗಲ್ಲ..'

'ನಿಮ್ಮತ್ತಿಗೇಗೆ ನಾನು ಮಾಡಿದ್ದು ಪಥ್ಯ ಆಗ್ಬೇಕಲ್ಲ?' ಅನ್ನುತ್ತಿದ್ದಳು ನಾಗಶ್ರೀ. ಒಟ್ಟನಲ್ಲಿ ಈಚೆ ಕಡ್ಡಿ ತೆಗೆದು ಆಚೆಗೆ ಇಡುವುದಿಲ್ಲ ಅನ್ನುವಷ್ಟಲ್ಲದಿದ್ದರೂ ನಾಗಶ್ರೀಯ ದಿನಚರಿ ಗುಡಿಸು, ವರೆಸು ಮುಂತಾದ ಸಣ್ಣಪುಟ್ಟ ಕೆಲಸಗಳಿಗೆ ಸೀಮಿತವಾಗಿಬಿಟ್ಟಿತ್ತು. ಅಡಿಗೆ ಕೆಲಸ, ಕೊಟ್ಟಿಗೆ ಕೆಲಸ ಮುಂತಾದುವುಗಳ ಭಾರ ಭವಾನಿಯ ಪಾಲಿನದಾಗಿತ್ತು. ಕಿರಿ ಸೊಸೆ ಕಿವಿ ಕಚ್ಚಿದ್ರೂ ಚಂದ ಎನ್ನುವಂತಿತ್ತು ಆ ಮನೆಯ ಪರಿಸ್ಥಿತಿ. ಸೊಸೆಯಂದಿರ ತೌರುಮನೆಯ ಆಸ್ತಿ, ಅನುಕೂಲತೆಗಳ ಮೇಲೆ ಅವರ ಮೇಲಿನ ಆದರ, ಪ್ರೀತಿ ಕೂಡಾ ನಿರ್ಧಾರವಾಗುವುದು ವಿಪರ್ಯಾಸ ಅನಿಸಿದರೂ ಆ ಮನೆಯ ಮಟ್ಟಿಗೆ ನಿಜವಾಗಿತ್ತು.

ಎಲ್ಲ ನೆನಪಿದೆ ರಾಮಚಂದ್ರನಿಗೆ. ನೆನೆಸಿಕೊಳ್ಳಲು ಹೋದರೆ ಚಿಕ್ಕಪುಟ್ಟ ವಿವರಗಳೂ ಕೂಡಾ ಆಳ ಮನಸ್ಸಿನಿಂದ ಪುಟಿದೆದ್ದು ಮೇಲೆ ಬರುತ್ತವೆ.